Total No. of Questions : 61 ]

Total No. of Printed Pages : 4 ]

**Code No. 16**

**March, 2011**

# OPTIONAL KANNADA

Time : 3 Hours 15 Minutes ] [ Max. Marks : 100

***ಸೂಚನೆ :*** i) ಪ್ರಶ್ನೆಗಳ ಸಂಖ್ಯೆಗಳನ್ನು ಉತ್ತರ ಪತ್ರಿಕೆಯ ಎಡ ಭಾಗದಲ್ಲಿ ಬರೆಯಿರಿ.

ii) ಪ್ರತಿ ವಿಭಾಗದಲ್ಲಿರುವ ಸೂಚನೆಗಳಿಗೆ ಅನುಗುಣವಾಗಿ ಉತ್ತರಿಸಿ.

## ಭಾಗ – I

I. ಕೆಳಗಿನ ಪ್ರಶ್ನೆಗಳಿಗೆ ಒಂದೆರಡು ವಾಕ್ಯಗಳಲ್ಲಿ ಉತ್ತರಿಸಿ : $7 \times 1 = 7$

1) ವಿಳಾಸ ವನವನ್ನು ಯಾರ ರಾಣಿಯರು ಪ್ರವೇಶಿಸುತ್ತಾರೆ ?

2) ಸಾಮವೇದಿಗಳು ಶಿಷ್ಯರೊಂದಿಗೆ ಅರಣ್ಯಕ್ಕೆ ಬಂದ ಕಾರಣವೇನು ?

3) ಪಾರ್ಥ ಊರ್ವಶಿಯನ್ನು ಯಾವ ಶಬ್ದಗಳಿಂದ ಸ್ವಾಗತಿಸಿದ ?

4) ತೃಣವೇ ಪರ್ವತವಾಗುವುದು ಯಾವಾಗ ?

5) ಭರತನ ರಾಣಿಯರು ಪ್ರಾಣನಾಥನನ್ನು ನೋಡಲು ಎಲ್ಲಿಗೆ ಹೋದರು ?

6) ದೇವೇಂದ್ರ ಏತಕ್ಕಾಗಿ ಊರಿಗೆ ಹೊರಟಿದ್ದ ?

7) ಶ್ರೀ ವೀರಮಲ್ಲರಾಜ ಒಡೆಯನ ರಾಣಿಯ ಹೆಸರೇನು ?

II. ಕೆಳಗಿನ ಪ್ರಶ್ನೆಗಳಲ್ಲಿ ಯಾವುದಾದರೂ **ಮೂರಕ್ಕೆ** ಹತ್ತರಿಂದ ಹದಿನೈದು ಪದಗಳಲ್ಲಿ ಉತ್ತರಿಸಿ : $3 \times 2 = 6$

8) ಅಗ್ನಿಯು ಖಾಂಡವ ವನವನ್ನು ದಾನ ರೂಪದಲ್ಲಿ ಪಡೆಯಬಯಸಿದ್ದು ಏಕೆ ?

9) ಇಂದ್ರನ ರಥವೇರುವ ಸಂದರ್ಭದಲ್ಲಿ ಅರ್ಜುನನು ಅಮರಾವತಿಗೆ ಹೋಗಿಬರಲು ಯಾರ್‍ಯಾರ ಅನುಮತಿ ಬೇಡುತ್ತಾನೆ ?

10) ನರನು ಸರ್ವಜ್ಞನಾಗುವ ಪರಿ ಯಾವುದು ?

11) ನಾಡು ಯಾವಾಗ ಕೆಡುತ್ತದೆ ?

12) ಭರತೇಶನು ಅರಸಿಯರಿಂದ ಯಾವಯಾವ ಕಾಣಿಕೆಗಳನ್ನು ಪಡೆದನು ?

III. ಕೆಳಗಿನ ಪ್ರಶ್ನೆಗಳಲ್ಲಿ ಯಾವುದಾದರೂ **ಎರಡು** ಪ್ರಶ್ನೆಗಳಿಗೆ ಮೂವತ್ತರಿಂದ ನಲವತ್ತು ಪದಗಳಲ್ಲಿ ಉತ್ತರಿಸಿ : $2 \times 3 = 6$

13) 'ನೀನೆ ಭುವನಕ್ಕಾರಾಧ್ಯನೈ' ಎಂಬ ಕಾವ್ಯಭಾಗ ನೀಡುವ ಸಂದೇಶವೇನು ?

14) ವೇಷಧಾರಿ ಶಿವನು ಸಾಮವೇದಿಗಳಿಗೆ ತನ್ನ ನಿಜರೂಪವನ್ನು ಹೇಗೆ ತೋರಿದ ?

[ Turn over

15) ಖಾಂಡವ ವನದ ಕಾವಲು ವ್ಯವಸ್ಥೆ ಹೇಗಿತ್ತು ? ವಿವರಿಸಿ.

16) ಊರ್ವಶಿಯ ರೋಷದ ವರ್ಣನೆಯನ್ನು ಕುಮಾರವ್ಯಾಸ ಹೇಗೆ ಮಾಡಿದ್ದಾನೆ ?

IV. ಕೆಳಗಿನ ಪ್ರಶ್ನೆಗಳಲ್ಲಿ ಯಾವುದಾದರೂ **ಎರಡಕ್ಕೆ** ನಲವತ್ತರಿಂದ ಅರವತ್ತು ಪದಗಳಲ್ಲಿ ಉತ್ತರಿಸಿ : $2 \times 5 = 10$

17) ಸ್ತ್ರೀಯರು ಪ್ರಕೃತಿಯ ಬಳಿಗೆ ಬಂದು ಏನೆಂದು ಕ್ಷಮೆ ಕೇಳಿದರು ?

18) ಸಾಮವೇದಿಗಳ ಪಾಂಡಿತ್ಯ ಮತ್ತು ಪ್ರಭಾವಗಳನ್ನು ಹರಿಹರ ಕವಿ ಹೇಗೆ ವರ್ಣಿಸಿದ್ದಾನೆ ?

19) ಖಾಂಡವ ವನ ದಹನದ ಪ್ರಸಂಗದಲ್ಲಿ ಅರ್ಜುನ-ಕೃಷ್ಣರ ನಡುವೆ ನಡೆದ ಸಂವಾದದ ಸೊಗಸನ್ನು ನಿರೂಪಿಸಿ.

20) ಅರ್ಜುನನ ವ್ಯಕ್ತಿತ್ವವನ್ನು ಕುಮಾರವ್ಯಾಸ ಹೇಗೆ ಚಿತ್ರಿಸಿದ್ದಾನೆ ?

V. ಕೆಳಗಿನ ಪದ್ಯಗಳಲ್ಲಿ **ಎರಡರ** ಸಂದರ್ಭ ಸೂಚಿಸಿ ಮಹತ್ವವನ್ನು ತಿಳಿಸಿ : $2 \times 3 = 6$

21) ಪ್ರಜೆಯಂ ಪಾಲಿಸಬಲ್ಲೊಡಾತನರಸಂ ಕೈಯಾಸೆಯಂ ಮಾಡದಂ ।
ನಿಜ ಮಂತ್ರೀಶ್ವರ ತಂದೆ ತಾಯ ಸಲಹಲ್ ಬಲ್ಲಾತನೇ ಧಾರ್ಮಿಕಂ ॥
ಭಜಕಂ ದೈವದ ಭಕ್ತಿಯುಳ್ಳೊಡೆ ಭಟಂ ನಿರ್ಭೀತ ತಾನಾದವಂ ।
ದ್ವಿಜನಾಚಾರತೆಯುಳ್ಳವಂ ಹರಹರಾ ಶ್ರೀಚೆನ್ನಸೋಮೇಶ್ವರಾ ॥

22) ಉರಗನ ಹಲು ನಂಜು ಸುರಗೆಯ ಮೊನೆ ನಂಜು
ಕರುಣವಿಲ್ಲದನ ನುಡಿ ನಂಜು । ದುರ್ಜನರ
ಇರವೆಲ್ಲ ನಂಜು ಸರ್ವಜ್ಞ.

23) ಗೂಳಿ ನಡೆವ ಹೆಜ್ಜೆ ತೋರುವುದಲ್ಲದೆ
ಗಾಳಿಯ ಹೆಜ್ಜೆ ತೋರುವುದೆ
ಜಾಳುಗಳೊಳಗುಗಾಣಿಸುವುದಲ್ಲದೆ ತತ್ವ
ಶೀಲನೊಳಗ ಕಣ್ಬರಾರು.

VI. ಕೆಳಗಿನ ಸಾಲುಗಳಲ್ಲಿ **ಎರಡರ** ಸಂದರ್ಭವನ್ನು ಸೂಚಿಸಿ ಮಹತ್ವವನ್ನು ವಿವರಿಸಿ : $2 \times 2 = 4$

24) ಆಱುಂ ಋತುಗಳ ಚೆಲ್ವಂ ಕಾಣಲಾದುದು.

25) ಸೈಪಿನೊಳಲ್ಲದೆ ಕೂಡಿ ಬರ್ಕುಮೇ.

26) ಎನ್ನ ಗುರುಸಹಿತವಲ್ಲದೆ ಬಾರನೆಲೆ ದೇವ.

27) ಈ ಮಹಿಳೆ ಅಭಿನಂದನೀಯ.

## ಭಾಗ – II

VII. ಕೆಳಗಿನ ಪ್ರಶ್ನೆಗಳಲ್ಲಿ ಯಾವುದಾದರೂ ಎರಡಕ್ಕೆ ನಲವತ್ತರಿಂದ ಅರವತ್ತು ಪದಗಳಲ್ಲಿ ಉತ್ತರಿಸಿ : $2 \times 5 = 10$

28) ದೇವೇಂದ್ರ ಯಾರು ? ಅವನು ಪರೀಕ್ಷೆಯ ಆತಂಕದ ನಡುವೆಯೂ ಊರಿಗೆ ಬರಲು ಉಂಟಾದ ಕಾರಣವೇನು ?

29) ದೇವೇಂದ್ರನಿಗೆ ದಾರಿಯಲ್ಲಿ ಯಾರ್‍ಯಾರು ಸಹಾಯ ಮಾಡುತ್ತಾರೆ ? ಅದರ ವಿವರಗಳನ್ನು ತಿಳಿಸಿ.

30) ದೇವೇಂದ್ರನ ತಂದೆಯ ಪಾತ್ರ ಪರಿಚಯ ಮಾಡಿಕೊಡಿ.

VIII. ಕೆಳಗಿನ ಪ್ರಶ್ನೆಗಳಲ್ಲಿ ಯಾವುದಾದರೂ **ಒಂದಕ್ಕೆ** ಅರವತ್ತರಿಂದ ಎಂಬತ್ತು ಪದಗಳಲ್ಲಿ ಪ್ರಬಂಧ ಬರೆಯಿರಿ : $1 \times 10 = 10$

31) ದೇವೇಂದ್ರನ ತಾಯಿ ಮನೆತನವನ್ನು ಹೇಗೆ ನಿಭಾಯಿಸಿದಳು ?

32) ಗಿಲ್ ಯಾರು ? ದೇವೇಂದ್ರನಿಗೂ ಅವನಿಗೂ ಇದ್ದ ಸಂಬಂಧ ಎಂತಹುದು ? ಅವನು ದೇವೇಂದ್ರನಿಗೆ ನಿರೂಪಿಸಿದ ಕಥೆಯನ್ನು ತಿಳಿಸಿ.

## ಭಾಗ – III

IX. ಕೆಳಗಿನ ಸಾಲುಗಳಲ್ಲಿ ಯಾವುದಾದರೂ **ಎರಡರ** ಸಂದರ್ಭವನ್ನು ಸೂಚಿಸಿ ಮಹತ್ವವನ್ನು ವಿವರಿಸಿ : $2 \times 2 = 4$

33) ಮಹಾಸ್ವಾಮಿ ! ನಾನು ಹುಟ್ಟಿದ್ದು ಸಾರ್ಥಕವಾಯ್ತು.

34) ನಾನು ತಿಳಿಗನ್ನಡದಲ್ಲಿಯೇ ಹೇಳಿದೆನೆಂದು ನನಗೆ ಜ್ಞಾಪಕವಣ್ಣ.

35) ನಾನೊಬ್ಬ ಗಂಡಸಾಗಿ ಹುಟ್ಟಬಾರದಾಗಿದ್ದಿತೆ; ಅಯ್ಯೊ ?

X. ಕೆಳಗಿನ ಪ್ರಶ್ನೆಗಳಲ್ಲಿ ಯಾವುದಾದರೂ **ಎರಡಕ್ಕೆ** ಮೂವತ್ತರಿಂದ ನಲವತ್ತು ಪದಗಳಲ್ಲಿ ಉತ್ತರಿಸಿ : $2 \times 3 = 6$

36) ಮಾದೇವಮ್ಮಣ್ಣಿ ಕೆರಳಲು ಕಾರಣವೇನು ?

37) ಉಮ್ಮತ್ತೂರಿನ ರಾಜಾದಾಯದಲ್ಲಿ ಫೌಜುಗಂದಾಯವಾಗಿ ಏನೇನು ನೀಡಬೇಕೆಂದು ಮಹಾರಾಜರು ಸೂಚಿಸಿದರು ?

38) ನಂಜಶೆಟ್ಟಿ ಮಾದೇವಮ್ಮಣ್ಣಿಯ ಕ್ಷಮೆಯನ್ನು ಹೇಗೆ ಕೋರುತ್ತಾನೆ ?

XI. ಕೆಳಗಿನ ಪ್ರಶ್ನೆಗಳಲ್ಲಿ ಯಾವುದಾದರೂ **ಒಂದಕ್ಕೆ** ಅರವತ್ತರಿಂದ ಎಂಬತ್ತು ಪದಗಳಲ್ಲಿ ಪ್ರಬಂಧವನ್ನು ಬರೆಯಿರಿ : $1 \times 10 = 10$

39) ಇಮ್ಮಡಿ ತಿಮ್ಮರಾಜ ಒಡೆಯರ ವ್ಯಕ್ತಿತ್ವವನ್ನು ಸವಿವರವಾಗಿ ನಿರೂಪಿಸಿ.

40) ಮಹೀಶೂರ ಪ್ರಜೆಗಳ ರಾಜಭಕ್ತಿ ನಾಟಕದಲ್ಲಿ ಹೇಗೆ ವ್ಯಕ್ತವಾಗಿದೆ ?

## ಭಾಗ – IV

XII. ಕೆಳಗಿನ ಪದಗಳಲ್ಲಿ ಯಾವುದಾದರೂ **ಎರಡಕ್ಕೆ** ಟಿಪ್ಪಣಿ ಬರೆಯಿರಿ : $2 \times 2 = 4$

41) ಶ್ವೇತ ಕೃಷ್ಣಕಾರಕ

42) ತ್ರಿಪದಿ

43) ಅರಿಷಡ್ವರ್ಗಗಳು

XIII. ಕೆಳಗಿನ ಶಬ್ದಗಳಲ್ಲಿ ಯಾವುದಾದರೂ **ನಾಲ್ಕರ** ಅರ್ಥ ತಿಳಿಸಿ : $4 \times \frac{1}{2} = 2$

44) ನನೆ

45) ಆಮ್ರ

46) ಭಾಸುರ

47) ಗುಲ್ಮ

48) ದಂಡಿಗೆ

49) ಬಲ್ಲಿದ

XIV. ಕೆಳಗಿನ ಶಬ್ದಗಳಲ್ಲಿ ಯಾವುದಾದರೂ **ಮೂರು** ಪದಗಳಿಗೆ ಸಮಾನಾರ್ಥ ಪದಗಳನ್ನು ಬರೆಯಿರಿ : 3 × 1 = 3

50) ಇಳೆ

51) ಶಶಿ

52) ಕುಸುಮ

53) ಕಾನನ

54) ಅಗ್ನಿ

XV. ಕೆಳಗಿನ ನುಡಿಗಟ್ಟುಗಳಲ್ಲಿ ಯಾವುದಾದರೂ **ಎರಡನ್ನು** ಬಳಸಿ ಸ್ವಂತ ವಾಕ್ಯಗಳನ್ನು ರಚಿಸಿ : 2 × 1 = 2

55) ವೇದವಾಕ್ಯ

56) ಮೂಗುತೂರಿಸು

57) ತಲೆಬಾಗು

58) ಕಂಬಿಕೀಳು

## ಭಾಗ – V

XVI. ಕೆಳಗಿನ ಯಾವುದಾದರೂ **ಎರಡು** ಪ್ರಶ್ನೆಗಳಿಗೆ ಸೂಚನೆಗೆ ಅನುಗುಣವಾಗಿ ಉತ್ತರಿಸಿ : 2 × 5 = 10

59) ಈ ಕೆಳಗಿನ ಪದ್ಯಕ್ಕೆ ಪ್ರಸ್ತಾರ ಹಾಕಿ, ಗಣ ವಿಭಾಗ ಮಾಡಿ, ಛಂದಸ್ಸಿನ ಹೆಸರನ್ನು ತಿಳಿಸಿ :

ಧರೆ ಬಣ್ಣಿಸೆ ಸುಖವಿಡಿದಾ
ದರದಿಂದವೆ ಮೆರೆದ ಸಾಮವೇದಿಯ ವರದಿಂ
ದುರುತರ ಭಕ್ತಿಯನೀವುದು
ಕರುಣಾಕರ ದೇವ ಹಂಪೆಯ ವಿರೂಪಾಕ್ಷಂ.

60) ಈ ಕೆಳಗಿನ ಗದ್ಯಭಾಗವನ್ನು ಹೊಸಗನ್ನಡಕ್ಕೆ ಅನುವಾದಿಸಿ :

ಇತ್ತ ಮಣಮಂದಪುತ್ತೂರಿಂದೊರ್ವಂ ಪರಿತಂದು ಮೆಯಿಕ್ಕಿ ದೇವ ಇಂದೀಗಳೊರ್ವ ವೃದ್ಧ ಮಾಹೇಶ್ವರಂ ಬಂದು ಚಪ್ಪರಮಂ ಮುಱಿದು ತೋರಣಮಂ ಪಱಿದು ವೇದಿಕೆಯಂ ಕೆಡಹಿ ಬಾಯ್ಗೆ ಬಂದುದನೆಂದು ಕಯ್ಗೆ ಬಂದುದಂ ಮಾಡಿದಂ – ಇದೆಮಗಪಶಕುನಂ ಈ ಬಾರಿ ಮದುವೆಯಳವಡದು ಎನುತ್ತೆ ಅವಂ ಪೋಗಲ್.

61) ಕೆಳಗೆ ಸೂಚಿಸಿರುವ ಯಾವುದಾದರೂ **ಒಂದು** ವಸ್ತುವಿನ ಬಗೆಗೆ ಸ್ವಂತ ಕತೆ / ಕವಿತೆಯನ್ನು ರಚಿಸಿ :

ಅ) ದೇಶಭಕ್ತಿ

ಆ) ಪ್ರಕೃತಿ